ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 21-02-2015

# ಪತ್ರಿಕಾ ಪ್ರಕಟಣೆ

## ರಾಜ್ಯ ವಿಧಾನಸಭೆ ಅಧಿವೇಶನ ಮಾರ್ಚ್ 13 ರಿಂದ :
## ಮಾರ್ಚ್ 13 ರಂದೇ ರಾಜ್ಯ ಆಯವ್ಯಯ

**ಬೆಂಗಳೂರು, ಫೆಬ್ರವರಿ 21 (ಕರ್ನಾಟಕ ವಾರ್ತೆ)**

ಕರ್ನಾಟಕ ವಿಧಾನಸಭೆಯ ಅಧಿವೇಶನವು ಮಾರ್ಚ್ 13 ರಂದು ಮಧ್ಯಾಹ್ನ 12-30 ಗಂಟೆಗೆ ಸಮಾವೇಶಗೊಳ್ಳಲಿದ್ದು, ಮಾರ್ಚ್ 13 ರಂದೇ 12-30 ಗಂಟೆಗೆ ರಾಜ್ಯ ಆಯವ್ಯಯವು ಮಂಡನೆಯಾಗಲಿದೆ ಎಂದು ರಾಜ್ಯ ವಿಧಾನಸಭೆಯ ಕಾರ್ಯದರ್ಶಿ ಶ್ರೀ ಪಿ. ಓಂ ಪ್ರಕಾಶ್ ಅವರು ತಿಳಿಸಿದ್ದಾರೆ.

ಮಾರ್ಚ್ 13 ರಂದು ಆರಂಭವಾಗಲಿರುವ ರಾಜ್ಯ ವಿಧಾನಸಭೆಯ ಅಧಿವೇಶನವು ಮಾರ್ಚ್ 31 ರವರೆಗೆ ಸಮಾವೇಶಗೊಂಡು ಸರ್ಕಾರಿ ಮತ್ತು ಖಾಸಗಿ ಕಲಾಪಗಳನ್ನು ನಡೆಸಲಿದೆ. ಈ ಅವಧಿಯಲ್ಲಿ ಬರುವ ಶನಿವಾರ ಮತ್ತು ಭಾನುವಾರಗಳಂದು ವಿಧಾನಸಭೆ ಕಲಾಪಗಳು ಇರುವುದಿಲ್ಲ ಎಂದು ಶ್ರೀ ಪಿ. ಓಂ ಪ್ರಕಾಶ್ ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ವಿದೇಶ ವ್ಯಾಸಂಗಕ್ಕೆ ಸಾಲ ನೆರವು

**ಬೆಂಗಳೂರು, ಫೆಬ್ರವರಿ 21 (ಕರ್ನಾಟಕ ವಾರ್ತೆ)**

**ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಶೈಕ್ಷಣಿಕ ಸಾಲ ಯೋಜನೆಯಲ್ಲಿ ಶ್ರೀ ರಂಗೇಗೌಡ ಕೆ ಚಿಗಳಿಕಟ್ಟೆ ಗ್ರಾಮ ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಕೆನಡಾದ ಒಟಾವ ವಿಶ್ವವಿದ್ಯಾಲಯದಲ್ಲಿ Master of Engineering Course ನಲ್ಲಿ ವ್ಯಾಸಂಗ ಮಾಡಲು 2 ವರ್ಷದ ಕೋರ್ಸ್‌ನ ಅವಧಿಗೆ ಒಟ್ಟು ರೂ 12,31,200/- ಗಳನ್ನು ಮಂಜೂರು ಮಾಡಿದೆ. ಮೊದಲ ಕಂತಾಗಿ ರೂ 6,15,600/- ಗಳನ್ನು ಮಂಜೂರು ಮಾಡಿದ ಚೆಕ್‌ನ್ನು**

ನಿಗಮದ ಅಧ್ಯಕ್ಷ ಶ್ರೀ ಎಂ. ರಾಮಚಂದ್ರಪ್ಪ ಫೆಬ್ರವರಿ 20 ರಂದು ವಿದ್ಯಾರ್ಥಿಯ ಪೋಷಕರಿಗೆ ವಿತರಿಸಿದರು. ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಯು.ಪಿ. ಚಂದ್ರಶೇಖರ್ ಉಪಸ್ಥಿತರಿದ್ದರು.
ಬಾಬು:ಜಿಪಿಆರ್

**ವಾರ್ತಾ ವಿಶೇಷ:**

# ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಕಾರ್ಯಚಟುವಟಿಕೆ

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ಹೊನ್ನಾವರ ಮತ್ತು ತಡಿ ಮೀನುಗಾರಿಕಾ ಬಂದರುಗಳಲ್ಲಿ ಪರ್ಸಿನ್ ಮೀನು ಮಾರಾಟ ಮಾಡಿ ಮೀನುಗಾರರು ಹಿಡಿದ ಮೀನಿಗೆ ಉತ್ತಮ ಬೆಲೆ ಒದಗಿಸುವುದು. ನಿಗಮವು ಮಂಗಳೂರು, ಮಲ್ಪೆ, ಗಂಗೊಳ್ಳಿ, ಭಟ್ಕಳ, ಹೊನ್ನಾವರ ಮತ್ತು ಕಾರವಾರಗಳಲ್ಲಿ ದಿನನಿತ್ಯ ಒಟ್ಟು 220 ಟನ್ ಮಂಜುಗಡ್ಡೆ ಸ್ಥಾವರಗಳನ್ನು ನಿರ್ವಹಿಸುತ್ತಿದ್ದು ಮೀನುಗಾರರಿಗೆ ಮತ್ತು ವ್ಯಾಪಾರಸ್ಥರಿಗೆ ನ್ಯಾಯೋಚಿತ ಬೆಲೆಯಲ್ಲಿ ಮಂಜುಗಡ್ಡೆ ನೀಡಲಾಗುತ್ತಿದೆ.

ಮೀನು ಹಾಳಾಗದಂತೆ ಶೀತಲೀಕರಣ ಮತ್ತು ಘನೀಕೃತ ವ್ಯವಸ್ಥೆ ಒದಗಿಸವುದು. ರಾಜ್ಯ ಸರ್ಕಾರದ ಮಾರಾಟಕರ ರಹಿತ ಡೀಸೆಲ್‌ನ್ನು ಮಂಗಳೂರು, ಮಲ್ಪೆ, ಗಂಗೊಳ್ಳಿ, ತದಡಿ ಹಾಗೂ ಕಾರವಾರದ ಬಂಕ್‌ಗಳ ಮೂಲಕ ಯಾಂತ್ರೀಕೃತ ದೋಣಿಯವರಿಗೆ ಸರಬರಾಜು ಮಾಡಲಾಗುತ್ತಿದೆ. ಮಂಗಳೂರು, ತದಡಿ ಹಾಗೂ ಕಾರವಾರದಲ್ಲಿ ಮೀನು ಸಂಸ್ಕರಣಾ ಸ್ಥಾವರ ಮತ್ತು ಫಿಶ್ ಮೀಲ್ ಸ್ಥಾವರವನ್ನು ಸ್ಥಾಪಿಸಿ ಮೀನು ಸಂಸ್ಕರಣಾ ಮತ್ತು ರಫ್ತು ಮಾಡಲು ಮೂಲ ಸೌಲಭ್ಯ ಒದಗಿಸುವುದು.

ರಾಜ್ಯದ ಒಳನಾಡು ಪ್ರದೇಶದಕ್ಕೆ ತಾಜಾ ಮತ್ತು ಶೀತಲೀಕೃತ ಮೀನು ಸರಬರಾಜು ಮಾಡಲು ಶೀತಲ ಸರಪಣಿ ಸ್ಥಾಪನೆ ಮಾಡಲಾಗಿದೆ. ರಾಜ್ಯದ ಪ್ರಮುಖ 16 ನಗರಗಳಲ್ಲಿ ಮೀನು ಉಪಹಾರ ಗೃಹ/ಮೀನು ಮಾರಾಟ ಮಳಿಗೆಗಳನ್ನು ಸ್ಥಾಪನೆ ಮಾಡಿ ಸಾರ್ವಜನಿಕರಿಗೆ ಪ್ರೋಟೀನ್ ಭರಿತ ಮೀನನ್ನು ನ್ಯಾಯೋಚಿತ ಬೆಲೆಯಲ್ಲಿ ಮಾರಾಟ ಮಾಡುವುದು.

ರಾಜ್ಯ ಸರ್ಕಾರದ ಮೀನುಗಾರಿಕೆ ಇಲಾಖೆಯ ಮತ್ಸ್ಯಾಶ್ರಯ ಯೋಜನೆಯ "ನೋಡಲ್ ಏಜೆನ್ಸಿ" ಯಾಗಿ ಕಳೆದ ಸುಮಾರು 15 ವರ್ಷಗಳಿಂದ ಕಾರ್ಯನಿರ್ವಹಿಸಲಾಗುತ್ತಿದೆ. ಅಲಂಕಾರಿಕ ಮೀನು, ಅಕ್ವೇರಿಯಮ್ ಮತ್ತು ಸಲಕರಣೆಗಳನ್ನು ನ್ಯಾಯೋಜಿತ ಬೆಲೆಯಲ್ಲಿ ಮಾರಾಟ ಮಳಿಗೆಗಳಲ್ಲಿ ಸಾರ್ವಜನಿಕರಿಗೆ ಒದಗಿಸುವುದು. **RKVY** ಹಾಗೂ **NFDV** ನೆರವಿನಲ್ಲಿ ಮೀನುಗಾರ ಮಹಿಳೆಯರಿಗೆ ಸುಸಜ್ಜಿತ ಸ್ವಚ್ಛ ಮೀನು ಮಾರುಕಟ್ಟೆಗಳನ್ನು ಒದಗಿಸುವುದು. ಈಗಾಗಲೇ ರಾಜ್ಯದ ಕರಾವಳಿಯಲ್ಲಿ 11 ಮೀನು ಮಾರುಕಟ್ಟೆ ನಿರ್ಮಿಸಲಾಗಿದೆ. ಮೀನುಗಾರಿಕಾ ಬಂದರುಗಳಲ್ಲಿ ಶುಲ್ಕ ವಸೂಲಾತಿ ನಿರ್ವಹಣೆ ಮಾಡಲಾಗುತ್ತಿದೆ.

ಕೇಂದ್ರ ಸರ್ಕಾರದ ಸಂಸ್ಥೆಯಾದ **NFDV** ವತಿಯಿಂದ ರಾಜ್ಯದಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳಿಗೆ ನಿಗಮವು "ನೋಡಲ್ ಏಜೆನ್ಸಿ" ಯಾಗಿ ಕಾರ್ಯನಿರ್ವಹಿಸುತ್ತಿದೆ.

ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಕರಾವಳಿ ಭಾಗದಲ್ಲಿ ಏಳು ಶಾಖೆಗಳಿದ್ದು, ಇವುಗಳು ಮುಖ್ಯವಾಗಿ ಡೀಸಲ್ ಸರಬರಾಜು, ಮಂಜುಗಡ್ಡೆ ವಿತರಣೆ ಹಾಗೂ ಮೀನು ಮಾರಾಟ ಚಟುವಟಿಕೆಗಳನ್ನು ನಡೆಸುತ್ತಿದ್ದು, ಎಲ್ಲಾ ಏಳು ಶಾಖೆಗಳು ಲಾಭದಲ್ಲಿದೆ.

2013 ಕ್ಕೆ ಹೋಲಿಸಿದಲ್ಲಿ ನಿಗಮದಲ್ಲಿ 2014 ರಲ್ಲಿ ಡೀಸಲ್ ಮಾರಾಟ ಪ್ರಮಾಣವು 1849 ಕಿಲೋ ಲೀಟರ್ ಹೆಚ್ಚಳವಾಗಿದೆ. ಮಂಜುಗಡ್ಡೆ ಮಾರಾಟವು 6067 ಟನ್ ಹೆಚ್ಚಾಗಿದೆ. ಇದರ ಒಟ್ಟು ಪ್ರಮಾಣವು ರೂ.

61 ಲಕ್ಷ ಆಗಿದೆ. ಪರ್ಸಿನ್ ಮೀನು ವ್ಯವಹಾರವು ರೂ. 288 ಲಕ್ಷ ಹೆಚ್ಚಾಗಿದೆ. ಮೀನುಗಾರಿಕಾ ಬಂದರು ಶುಲ್ಕ ವಸೂಲಾತಿ ರೂ. 51 ಲಕ್ಷ ಹೆಚ್ಚಾಗಿದೆ. ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿ ನಿಗಮವು 16 ನಗರಗಳಲ್ಲಿ ಭಾಗಶ: ಹವಾನಿಯಂತ್ರಿತ ಮೀನು ಮಾರಾಟ ಮಳಿಗೆ ಹಾಗೂ ಮೀನು ಉಪಹಾರ ಗೃಹಗಳನ್ನು ತೆರೆದಿದೆ.

ಕರಾವಳಿ ಮೀನುಗಾರಿಕೆಯನ್ನು ಸಾರ್ವಜನಿಕರಲ್ಲಿ ಜನಪ್ರಿಯಗೊಳಿಸಲು ಹಾಗೂ ಯೋಗ್ಯ ಬೆಲೆಗೆ ಮೀನು ಲಭ್ಯವಾಗುವಂತೆ ಮಾಡಲು ವಿವಿಧ ಸ್ಥಳಗಳಲ್ಲಿ ನಿಗಮದಿಂದ ಮೀನು ಮಾರಾಟ ಮಳಿಗೆ ತೆರೆಯಲಾಗಿದೆ.

ಮೀನು ಮಾರಾಟ ಮಳಿಗೆಗಳನ್ನು ಇನ್ನೂ ಆಕರ್ಷಣೀಯಗೊಳಿಸಿ, ವಿವಿಧ ಜಾತಿಯ ಮೀನು ಲಭ್ಯವಾಗುವಂತೆ ಮಾಡಿ ವ್ಯಾಪಾರ ಉತ್ತಮಗೊಳಿಸಲು ಅಗತ್ಯ ಅನುದಾನ ಪಡೆಯಲು ಯತ್ನಿಸಲಾಗುತ್ತಿದೆ. ಒಟ್ಟಾರೆ ನಿಗಮದ ಎಲ್ಲಾ ಮಳಿಗೆಗಳ ಲೆಕ್ಕಪರಿಶೋಧನೆಯಿಂದಾಗಿ 65.19 ಲಕ್ಷ ರೂ. ಆದಾಯಗಳಿಸಿದೆ.

ಬಾಬು:ಜಿಪಿಆರ್

## ಛಾಯಾಚಿತ್ರ ಶೀರ್ಷಿಕೆ:

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಶೈಕ್ಷಣಿಕ ಸಾಲ ಯೋಜನೆಯಲ್ಲಿ ವಿದೇಶದಲ್ಲಿ ವಿದ್ಯಾಭ್ಯಾಸ ನಡೆಸಲು ಮಂಜೂರು ಮಾಡಿದ ಚೆಕ್ಕನ್ನು ನಿಗಮದ ಅಧ್ಯಕ್ಷ ಶ್ರೀ ಎಂ. ರಾಮಚಂದ್ರಪ್ಪ ವಿದ್ಯಾರ್ಥಿಯ ಪೋಷಕರಿಗೆ ವಿತರಿಸಿದರು.